ನವರೂ ನಮ್ಮನ್ನು recognize ಮಾಡಿದ್ದಾರೆ. ಇಡೀ ದೇಶದಲ್ಲಿಯೇ best ಮೂಲಭೂತ ಸೌಕರ್ಯವನ್ನು ಕೊಟ್ಟಿದ್ದೀರಿ ಎಂದು ಕಮಿಟಿಯವರು ನಮ್ಮನ್ನು ಕರೆದು ಹೇಳುತ್ತಾರೆ. ಆದರೆ ultimately V.C.I.ಯವರು reject ಮಾಡುತ್ತಾರೆ. ಈ ರೀತಿ ಆಗಿರುವುದರಿಂದ ಆ confusion ಅನ್ನು clear ಮಾಡುವುದಕ್ಕೋಸ್ಕರ ಅವರ ಮುಂದೆ ಹೋಗಿ ಮನವರಿಕೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ ತದನಂತರ ಏನು ಕ್ರಮ ಜರುಗಿಸಬೇಕು, ನಮ್ಮ Act ಪ್ರಕಾರ, ನಮ್ಮ students–ಅನ್ನು ಇವತ್ತು ಉಳಿಸಿಕೊಳ್ಳಬೇಕಾಗದಾಗ ಏನು ಮಾಡಬೇಕೆನ್ನುವುದರ ಬಗ್ಗೆ ನಾವು ತೀರ್ಮಾನ ಮಾಡುತ್ತೇವೆ.

ಅಧ್ಯಕ್ಷರು : ಈ ಚರ್ಚೆ ಇಲ್ಲಿಗೆ ಮುಕ್ತಾಯವಾಯಿತು. ಮಾನ್ಯ ಸಹಕಾರ ಸಚಿವರು ಮಾತನಾಡುವುದು.

4. ನಿಯಮ 69ರ ಅಡಿಯಲ್ಲಿ ಬರಗಾಲ ಪೀಡಿತ ತಾಲ್ಲೂಕುಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿರುವ ಬಗೆಗಿನ ಚರ್ಚೆಯಲ್ಲಿ ಸಹಕಾರಿ ಸಂಘದ ಬಗ್ಗೆ ಪ್ರಸ್ತಾಪಿಸಿದ್ದು ಸರ್ಕಾರದ ಉತ್ತರ

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ, ಸಹಕಾರ ಸಂಘದ ಸಾಲ ಮನ್ನಾ ಮಾಡುವಂತಹ ವಿಚಾರದಲ್ಲಿಯೂ ಕೂಡ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಸರ್ಕಾರದ ನಿಲುವನ್ನು ತಿಳಿಸಲು ಬಯಸುತ್ತೇನೆ.

ಕೃಷಿ ಸಹಕಾರ ಸಂಘಗಳಿಂದ ದಿನಾಂಕ 1.8.2011 ರಿಂದ 25.7.2012 ರ ಅವಧಿಯಲ್ಲಿ ಪಡೆದಂತಹ ಕೃಷಿ ಅಲ್ಪಾವಧಿ ಸಾಲ ಮತ್ತು ಅದರ ಬಡ್ಡಿಯನ್ನು ಮನ್ನಾ ಮಾಡುವಂತಹ ಒಂದು ನಿರ್ಧಾರವನ್ನು ಹಿಂದಿನ ಸರ್ಕಾರ ಘೋಷಣೆ ಮಾಡಿದೆ. ಆದರೆ ಆ ಘೋಷಣೆ ಮಾಡಿದಾಗ ಅದಕ್ಕೆ ಅಗತ್ಯವಾದ ಹಣವನ್ನು ಆ ಸಂದರ್ಭದಲ್ಲಿ ಅವರು ಮುಡುಪಾಗಿಟ್ಟಿರಲಿಲ್ಲ. 940 ಕೋಟಿ ರೂಪಾಯಿಗಳ ಆ ಒಂದು ಸಂದರ್ಭದಲ್ಲಿಟ್ಟಿದ್ದರು. ಆ ಹಣ ಈಗಾಗಲೇ ಜಮಾ ಆಗಿ, ಸರ್ಕಾರದ ಮುಖ್ಯಮಂತ್ರಿಗಳು ಬಜೆಟ್ ಮಂಡಿಸುವಾಗ ಈ ವರ್ಷದ ಬಜೆಟ್‌ನಲ್ಲಿಯೂ ಕೂಡ 800 ಕೋಟಿ ರೂಪಾಯಿ ಪ್ರಸ್ತಾಪ ಮಾಡಿದ್ದರು. ಅದರಲ್ಲಿ 200 ಕೋಟಿ ರೂಪಾಯಿ ಪ್ರಸ್ತಾಪ ಮಾಡಿದ್ದರು. ಅದರಲ್ಲಿ 200

ಕೋಟಿ ರೂಪಾಯಿಯನ್ನು ಈ quarter ನಲ್ಲಿ ಬಿಡುಗಡೆ ಮಾಡಿ ಜಮಾ ಮಾಡುವುದಕ್ಕೆ ಕೊಟ್ಟಿದ್ದೇವೆ. ಇಷ್ಟಾದರೂ ಕೂಡ ಅನೇಕ ಕಡೆ ಸಹಕಾರ ಸಂಘಗಳಲ್ಲಿ ಸಾಲ ಮರುಪಾವತಿ ಮಾಡಿದಂತಹ ಸಂದರ್ಭದಲ್ಲಿ ಅವರಿಗೆ ಮರು ಸಾಲ ಕೊಡುವಾಗ, PACS ಗಳಲ್ಲಿ 25,000 ರೂಪಾಯಿ ಹಣವನ್ನು deposit ಆಗಿ ಇಟ್ಟುಕೊಂಡು ಸರ್ಕಾರದಿಂದ ಮರುಪಾವತಿ ಬಂದ ಮೇಲೆ ಕೊಡುತ್ತೇವೆ ಎಂದು ಇಟ್ಟುಕೊಳ್ಳುತ್ತಿದ್ದಾರೆ. ಅದೂ ಕೂಡ ತಮ್ಮ ಗಮನಕ್ಕೆ ಬಂದು ತಾವೂ ಕೂಡ ನನ್ನ ಗಮನಕ್ಕೆ ತಂದಿದ್ದೀರಿ. ಈಗ ಆ ಕಾರಣಕ್ಕಾಗಿಯೇ ನಾವು ಈ ಹಿಂದೆ ಈ ಸರ್ಕಾರ ಯೋಜನೆಯನ್ನು ತರುವುದಕ್ಕೆ ಮುಂಚೆ, ಈ ರೀತಿ floating ಆಗಿ disperse ಮಾಡಲು ಒಂದು corpus fundಎಂದು 400–500 ಕೋಟಿ ರೂಪಾಯಿ ಇಟ್ಟು ಈ ಯೋಜನೆಯನ್ನು ಜಾರಿಗೆ ತರಬೇಕಾಗಿತ್ತು. ಏಕಾಏಕಿ ಸಾಲ ಮನ್ನಾ ಘೋಷಣೆ ಮಾಡಿ ಅದಕ್ಕೆ ಬೇಕಾದಂತಹ ಹಣಕಾಸಿನ ವ್ಯವಸ್ಥೆಗಳನ್ನು ಮಾಡಿಕೊಳ್ಳದೇ ಇರುವುದರಿಂದ ಗೊಂದಲ ಸೃಷ್ಟಿಯಾಗಿದೆ. ಈಗ ಸರ್ಕಾರದ ಮುಂದೆ ಬಂದಿರುವಂತಹ ಪೆಂಡಿಂಗ್ ಬಿಲ್ಸ್ ಕೇವಲ 71 ಕೋಟಿ ರೂಪಾಯಿಯಷ್ಟು ಮಾತ್ರ ಇದೆ. ಆದರೆ ಇನ್ನೂ 300–400 ಕೋಟಿ ರೂಪಾಯಿಯಷ್ಟು ಆ ಸರ್ಕಾರಕ್ಕೂ ಮತ್ತು PACSಗಳ ಮಧ್ಯೆ correspondence ನಲ್ಲಿದೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲೂ ಕೂಡ ಮನವಿ ಮಾಡಿದ್ದೇನೆ. ಮುಂಗಾರು ಪ್ರಾರಂಭವಾಗುತ್ತಿರುವುದರಿಂದ ರೈತರಿಗೆ ಸಾಲದ ಕೊರತೆಯಾಗಬಾರದು, ಸಾಲ ಮನ್ನಾ ಯೋಜನೆಯಿಂದ ಅನುಕೂಲವಾಗಬೇಕೇ ಹೊರತು, ಅವರಿಗೆ ಬೇರೆ ರೀತಿಯ ತೊಂದರೆಯಾಗಬಾರದು. ಅದಕ್ಕಾಗಿ ಕೂಡಲೇ ಹಣ ಬಿಡುಗಡೆ ಮಾಡಿಸುವಂತಹ ಕ್ರಮ ತೆಗೆದುಕೊಂಡಿದ್ದೇವೆ. ಸದ್ಯದಲ್ಲಿಯೇ ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸರ್ಕಾರದಿಂದ ಯಾವುದೇ ಬಾಜಿ ಇಲ್ಲದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ತೆಗೆದುಕೊಳ್ಳೋಣ. ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ ಒಂದು ನಿಮಿಷ. ಮಾನ್ಯ ಸಚಿವರೆ, ಹಿಂದಿನ ಸರ್ಕಾರ ಸಾಲ ಮನ್ನಾ, ಬಡ್ಡಿ ಮನ್ನಾ ಮಾಡಿತ್ತು. ಆ ಸಂದರ್ಭದಲ್ಲಿ 940 ಕೋಟಿ ರೂಪಾಯಿ ಹಣವನ್ನು ಬಿಡುಗಡೆ

ಮಾಡಿತ್ತು. ಉಳಿದಂತಹ ಹಣ ಬಿಡುಗಡೆ ಮಾಡುವುದರೊಳಗೆ ಸರ್ಕಾರ ಹೋಯಿತು. ನಿಮ್ಮ ಹೊಸ ಸರ್ಕಾರ ಬಂದಿತು. ಮುಂದಿನ ಬಜೆಟ್‌ನಲ್ಲಿ ತಾವು ಹೇಳಿದಂತೆ, 800 ಕೋಟಿ ರೂಪಾಯಿಯನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿತ್ತು. ಈ ಹಂಗಾಮಿನಲ್ಲಿ ಸಾಲ ಕೊಡುವಂತಹ ಅಗತ್ಯವಿರುವಂಥದ್ದನ್ನು ಬಡ್ಡಿ ಮನ್ನಾ, ರೈತರ ಸಾಲ ಮನ್ನಾದ ಅಮೌಂಟ್‌ಅನ್ನು ಪೂರ್ಣ ಜಮಾ ಮಾಡದೇ ಹೋದರೆ ಸಾಧ್ಯವಾಗುವುದಿಲ್ಲ. ನಾವು ಈಗಾಗಲೇ ಜೂನ್ ಮೊದಲನೇ ವಾರದಲ್ಲಿದ್ದೇವೆ. ಈಗಾಗಲೇ ರೈತರಿಗೆ ಸಾಲ ಸಿಕ್ಕಿ, ಬಿತ್ತನೆ ಕೆಲಸ ಪ್ರಾರಂಭವಾಗಿ ರಸಗೊಬ್ಬರ ಹಾಗೂ ಕೃಷಿ ಚಟುವಟಿಕೆಗಾಗಿ ರೈತರಿಗೆ ಹಣ ಬೇಕು. ಈ ಸಮಯದಲ್ಲಿ ನಾವೇನಾದರೂ ಮೀನಾ-ಮೇಷ ಮಾಡಿದರೆ, ಕಷ್ಟವಾಗುತ್ತದೆ. ಬೇರೆ ಆದ್ಯತೆಗಿಂತ ಇದು ಹೆಚ್ಚಿನ ಆದ್ಯತೆ ಇರುವಂಥದ್ದು. ಯಾವುದೇ ಸರ್ಕಾರಗಳು ಬರಲಿ ಹೋಗಲಿ, ಹಿಂದಿನ ಸರ್ಕಾರಗಳು ಮಾಡಿದಂತಹ ರೈತರ ಪರವಾದಂತಹ ಯೋಜನೆಗಳು ಮುಂದುವರೆಯಬೇಕು. ಅವುಗಳಿಗೆ ತಾವು ಕಡಿವಾಣ ಹಾಕುವುದಿಲ್ಲ, ಧಾರಾಳವಾಗಿ ಮಾಡುತ್ತೀರಿ ಎನ್ನುವ ವಿಶ್ವಾಸವಿದೆ. ರೈತರು ನಿಮ್ಮನ್ನು ನಂಬಿ ಈ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ಈ ಹಂಗಾಮಿನಲ್ಲಿ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದ ರೀತಿಯಲ್ಲಿ ಈಗಾಗಲೇ ಅವರಿಗೆ ಸಾಲ ಸಿಗಬೇಕಾಗಿತ್ತು. ಈಗ co-operative societies ನಲ್ಲಿ ದುಡ್ಡಿಲ್ಲ. ಏಕೆಂದರೆ ಸಾಲ ಮನ್ನಾ ಮಾಡಿರುವುದರಿಂದ ಸರ್ಕಾರದಿಂದ ಜಮಾವಾಗದೇ ರೈತರಿಗೆ ಸಾಲ ಕೊಡುವಂತಹ ಶಕ್ತಿ ಸಹಕಾರಿ ಬ್ಯಾಂಕ್‌ಗಳಿಗೆ ಇಲ್ಲ. ಅದಕ್ಕೋಸ್ಕರ ಇವತ್ತು ನಾಳೆಯೊಳಗಾಗಿ ರೈತರ ಪರವಾಗಿ ಪೂರ್ತಿ ಹಣ ಕಟ್ಟಿದರೆ ಅವರಿಗೆ ಸಾಲ ಸಿಗುತ್ತದೆ ಅನುಕೂಲವಾಗುತ್ತದೆ. ಇಲ್ಲವಾದರೆ 25,000 ರೂಪಾಯಿ ಸಾಲ ಮನ್ನಾ ಮಾಡಿರುವುದೇ ಅವನಿಗೆ ಗಂಡಾಂತರವಾಗಿ ಮುಂದಿನ ಕೃಷಿ ಚಟುವಟಿಕೆಗಳಿಗೆ ಅಡ್ಡಯಾಗುತ್ತದೆ. ಅದಕ್ಕೋಸ್ಕರ ತಾವು ತಡ ಮಾಡದೇ ತತ್‌ಕ್ಷಣವೇ ಇವತ್ತು ಅಥವಾ ನಾಳೆ, ನಾಳಿದ್ದು, ಎಲ್ಲವನ್ನೂ ಬದಿಗೊತ್ತಿ ಇದಕ್ಕೆ top priority ಯೊಂದಿಗೆ ಹಣ ಬಿಡುಗಡೆ ಮಾಡದೇ ಹೋದರೆ, ರೈತ ಸಂಕಷ್ಟಕ್ಕೆ ಸಿಲುಕುತ್ತಾನೆ. ಅಹಾರಕ್ಕೆ ಹಾಹಾಕಾರವಾಗುತ್ತದೆ. ರೈತರ ಹತ್ತಿರ ಹಣವಿಲ್ಲ. ಆದ್ದರಿಂದ ಅದಕ್ಕೆ ಸಂಬಂಧಪಟ್ಟಂತೆ ಇನ್ನು 54 ಗಂಟೆಗಳಲ್ಲಿ, 48

ಗಂಟೆಗಳಲ್ಲಿ ಪೂರ್ತಿ ಹಣ ಬಿಡುಗಡೆ ಮಾಡುವುದಕ್ಕೆ ಗಮನವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಯ ಪೂರ್ವಕವಾಗಿ ಒತ್ತಾಯ ಮಾಡುತ್ತಿದ್ದೇನೆ. ರೈತರ ಸಾಲ ಮನ್ನಾ ಆಗಿರುವಂಥದ್ದನ್ನು ತಾವು ಪೂರ್ಣ ಕಟ್ಟದಿದ್ದರೆ ಈ ಹಂಗಾಮಿನಲ್ಲಿ ಸಾಲ ಸಿಗುವುದಿಲ್ಲ. ಪೂರ್ಣ ಹಣವನ್ನು ಇವತ್ತು ನಾಳೆಯೊಳಗೆ ಕಟ್ಟಿದರೆ ಹೊಸದಾಗಿ ಸಾಲ ಸಿಗುವುದಕ್ಕೆ ಅನಕೂಲವಾಗುತ್ತದೆ, ದಯಾಮಾಡಿ ತಾವು ಮಧ್ಯಪ್ರವೇಶ ಮಾಡಬೇಕು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು) : ಈಗಲೇ ಮಾಡುತ್ತೇವೆ ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಅಧ್ಯಕ್ಷರೆ, ಏನು ಬಿಲ್ ಇದೆ. 1,400 ಕೋಟಿ ರೂಪಾಯಿಯೋ, 1,500 ಕೋಟಿ ರೂಪಾಯಿಯೋ ಎಷ್ಟು ಬಾಕಿ ಕೊಡಬೇಕು ಆ ಹಣವನ್ನು ಬಿಡುಗಡೆ ಮಾಡುತ್ತೇವೆ.

(ಗೊಂದಲ)

ಶ್ರೀ ಶಿವಾನಂದ ಎಸ್.ಪಾಟೀಲ್ (ಬಸವನ ಬಗೇವಾಡಿ) : 1,500 ಕೋಟಿ ರೂಪಾಯಿ ಅಲ್ಲ ಸರ್, ಇನ್ನೂ 1,800 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : Principal ಆಯಿತು.

ಶ್ರೀ ಸಿದ್ದರಾಮಯ್ಯ : 3,500 ಕೋಟಿ ರೂಪಾಯಿ ಎಂದು ಮನ್ನಾ ಮಾಡಿದರೂ. 940 ಕೋಟಿ ರೂಪಾಯಿ ಕೊಟ್ಟರು. ಈಗ 800 ಕೋಟಿ ರೂಪಾಯಿ ಇದೆ. ಈಗ ಬಂದಿರತಕ್ಕಂಥ ಬಿಲ್‌ಗಳ ಬಾಕಿ 200 ಕೋಟಿ – ರೂಪಾಯಿ clear ಮಾಡಲಾಗಿದೆ. ಉಳಿದಿದ್ದನ್ನು ಕೂಡಲೇ ಬಿಡುಗಡೆ ಮಾಡುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರು (ಹುಬ್ಬಳ್ಳಿ–ಧಾರವಾಡ ಸೆಂಟ್ರಲ್) :– ಯಾವುದೇ due ಇಲ್ಲ. Code of conduct ಬಂದಿದ್ದರಿಂದ ಅಧಿಕಾರಿಗಳು ಬಿಡುಗಡೆ ಮಾಡಲಿಲ್ಲ. ಹಿಂದಿನ ವರ್ಷವೇ ಮಾಡಬೇಕಾಗಿತ್ತು. ಮಾಡಿಲಿಲ್ಲ. ಅದಕ್ಕಾಗಿ ದಯವಿಟ್ಟು ಬೇಗನೆ ಮಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಸಾಲವನ್ನು ಮರುಪಾವತಿ ಮಾಡಿದ ಮೇಲೆ ಆ ಬಿಲ್‌ಗಳು ಸರ್ಕಾರದ

ಮಟ್ಟಕ್ಕೆ ಬರುವುದಕ್ಕೆ 2–3 ತಿಂಗಳುಗಳ ಕಾಲ ಹಿಡಿಯುತ್ತದೆ. ಆ ಮೂರು ತಿಂಗಳಿನ ಅವಧಿಯಲ್ಲಿ ರೈತನಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಇಂತಹ ಯೋಜನೆಯನ್ನು ಮಾಡುವಾಗ ಇದಕ್ಕಾಗಿ ಒಂದು ಅವರ್ತನಿಧಿಯನ್ನಿಟ್ಟು immediate ಆಗಿ ಹಣವನ್ನು ಬಿಡುಗಡೆ ಮಾಡುವಂತಹ ವ್ಯವಸ್ಥೆಗಳು ಆಗಬೇಕಾಗಿತ್ತು. ಅದನ್ನು ಮಾಡಲಿಲ್ಲ. ಈಗ ನಮ್ಮ ಮುಂದೆ 70 ಕೋಟಿ ರೂಪಾಯಿಗಳ pending bills ಬಂದಿದೆ. ಆ ಹಣವನ್ನು ಬಿಡುಗಡೆ ಮಾಡಿ ಮತ್ತು ಇನ್ನೂ ಸುಮಾರು 400 ಕೋಟಿ ರೂಪಾಯಿಗಳು pipeline ನಲ್ಲಿ floating ನಲ್ಲಿದೆ. ಅದು correspondence ಬಂದು ನಮಗೆ reach ಆಗುವುದರೊಳಗೆ ಬಿಡುಗಡೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸೂಚನೆ ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರೆ, ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಹಳ್ಳಿಗಳಿಗೆ ಹೋದಾಗಲೆಲ್ಲಾ ಹಣವು ಅವರ account ಜಮಾ ಆಗದೆ ಇರುವುದರಿಂದ ಪಾಪ ಅವರಿಗೆ crop loan ಸಿಗುತ್ತಿಲ್ಲ. ಅವರಿಗೆ crop loan ಸಿಗುವುದಕ್ಕೆ ಅವಕಾಶವನ್ನು ಮಾಡಿಕೋಡಿ. ಈಗ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾನ್ಯ ರಮೇಶ್ ಕುಮಾರ್‌ರವರೆ, ತಾವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು....

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಕೆಪಿಎಸ್‌ಸಿ ವಿಚಾರದಲ್ಲಿ ಬೆಳಕು ಚೆಲ್ಲುತ್ತಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರೆ, ತಾವು ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಮಾತನಾಡಿ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಕೆಪಿಎಸ್‌ಸಿ ನೇಮಕಾತಿ ಸಂದರ್ಶನದಲ್ಲಿ ನಡೆದಿರುವ ಅವ್ಯವಹಾರದ ಕುರಿತು

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರ, ಇಲ್ಲಿ ಪ್ರಶ್ನೆ ಇರುವಂತಹದ್ದು